# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಬೆಳಗಾವಿ

ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/1/2024, ದಿನಾಂಕ: 27.02.2024

## ತಿದ್ದುಪಡಿ ಅಧಿಸೂಚನೆ

ಬೆಳಗಾವಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಅಧಿಸೂಚನೆ ಸಂಖ್ಯೆ: ಬೆಜಿನ್ಯಾ/ಆಡಳಿತ/ನೇಮಕಾತಿ/**1/2024,** ದಿನಾಂಕ: **27.02.2024** ರಡಿಯಲ್ಲಿ ಬೆಳಗಾವಿಯ ನ್ಯಾಯಾಂಗ ಘಟಕದ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರುವ **05** ಶೀಘ್ರಲಿಪಿಗಾರರು **(Stenographer Grade-III)** ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇರ ನೇಮಕಾತಿಯ ಮೂಲಕ ಆಯ್ಕೆ ಮಾಡುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಆದರೆ ಈಗ ಈ ಜಿಲ್ಲಾ ನ್ಯಾಯಾಂಗ ಘಟಕದಲ್ಲಿ ಹಿಂಬಾಕಿ ಉಳಿದಿರುವ **13** ಶೀಘ್ರಲಿಪಿಗಾರರ **(Stenographer Grade-III)** ಹುದ್ದೆಗಳಿಗೂ ಸಹ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಸದರಿ ಅಧಿಸೂಚನೆಯ ಪುಟ ಸಂಖ್ಯೆ **02** ರಲ್ಲಿ ಹಾಗೂ ಅರ್ಜಿಯನ್ನು ಸಲ್ಲಿಸಲು ಮತ್ತು ಅರ್ಜಿ ಶುಲ್ಕವನ್ನು ಪಾವತಿ ಮಾಡಲು ನಿಗಧಿಪಡಿಸಿದ್ದ ಕೊನೆಯದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಪ್ರಕಟಿಸಲಾಗಿರುತ್ತದೆ.

### I) ಶೀಘ್ರಲಿಪಿಗಾರರು ಗ್ರೇಡ್-III (Stenographers-Grade III)

I) ಹುದ್ದೆಗಳ ಸಂಖ್ಯೆ : 18 (05 ಹೊಸ ಹುದ್ದೆಗಳು + 13 ಹಿಂಬಾಕಿ ಹುದ್ದೆಗಳು)

II) ವೇತನ ಶ್ರೇಣಿ : 27650-650-29600-750-32600-850-36000-950-39800-1100-46400-1250-52650 ಹಾಗೂ ಲಭ್ಯವಿರುವ ಇತರೆ ಭತ್ಯೆಗಳು

**:: ಹುದ್ದೆಗಳ ವರ್ಗೀಕರಣ ::**

**ಅ) ಹೊಸ ಹುದ್ದೆಗಳು-05 ::**

| ವರ್ಗ | ಇತರೆ | ಮಹಿಳಾ ಅಭ್ಯರ್ಥಿ | ಒಟ್ಟು |
|---|---|---|---|
| ಸಾಮಾನ್ಯ | 1 | 1 | 02 |
| ಪರಿಶಿಷ್ಟ ಜಾತಿ | 1 | -- | 01 |
| ಪರಿಶಿಷ್ಟ ಪಂಗಡ | 1 | -- | 01 |
| ಪ್ರವರ್ಗ - I | 1 | -- | 01 |
| **ಒಟ್ಟು** | **04** | **01** | **05** |

....2.

**ಆ) ಹಿಂಬಾಕಿ/ಬ್ಯಾಕ್ ಲಾಗ್ ಹುದ್ದೆಗಳು -13 ::**

| ವರ್ಗ | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ | ಯೋಜನಾ ನಿರಾಶ್ರಿತ | ಅಂಗವಿಕಲರು | ಮಾಜೀ ಸೈನಿಕರು | ಒಟ್ಟು |
|---|---|---|---|---|---|---|---|
| ಸಾಮಾನ್ಯ | -- | 01 | -- | -- | -- | -- | 01 |
| ಪ್ರವರ್ಗ-IIA | -- | -- | 01 | -- | -- | -- | 01 |
| ಪ್ರವರ್ಗ-IIB | 01 | -- | 01 | -- | 01** | -- | 03 |
| ಪ್ರವರ್ಗ-IIIA | -- | 01 | 01 | -- | 01 | -- | 03 |
| ಪರಿಶಿಷ್ಟ ಜಾತಿ | -- | -- | 01 | -- | -- | 01 | 02 |
| ಪರಿಶಿಷ ಪಂಗಡ | -- | 01 | 01 | 01 | -- | -- | 03 |
| **ಒಟ್ಟು** | **01** | **03** | **05** | **01** | **02** | **01** | **13** |

**** ಚಿಹ್ನೆಯನ್ನು ತೋರಿಸಿರುವ ಹುದ್ದೆಯು ಚಲನವಲನ ವೈಕಲ್ಯ ಹೊಂದಿದವರಿಗೆ** (Locomotive Disorder) ಅಭ್ಯರ್ಥಿಗೆ ಮೀಸಲಿರಿಸಲಾಗಿದೆ ಹಾಗೂ ಸದರಿ ಹುದ್ದೆಯು ಹಿಂಬಾಕಿ ಉಳಿದ ಹುದ್ದೆಯಾದ್ದರಿಂದ ಅಧಿಸೂಚಿಸಿದ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಯು ಲಭ್ಯವಾಗದೇ ಇದ್ದ ಪಕ್ಷದಲ್ಲಿ ಆಯಾ ಪ್ರವರ್ಗದ ಇತರ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳಲಾಗುವುದು, ಒಂದು ವೇಳೆ ಯಾವುದೇ ಅಂಗವೈಕಲ್ಯವನ್ನುಳ್ಳ ಅಭ್ಯರ್ಥಿಗಳು ಲಭ್ಯರಾಗದಿದ್ದಲ್ಲಿ ಆಯಾ ಪ್ರವರ್ಗದ ಇತರ ಅರ್ಹ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳಲಾಗುವುದು.

ಮೇಲೆ ತಿಳಿಸಿದ ದಿನಾಂಕಃ **27.02.2024** ರ ಅಧಿಸೂಚನೆಯನಲ್ಲಿನ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಹಾಗೂ ಆನ್‌ಲೈನ್ ಮುಖಾಂತರ ಶುಲ್ಕವನ್ನು ಪಾವತಿಸಲು ನಿಗಧಿಪಡಿಸಲಾಗಿದ್ದ ಕೊನೆಯ ದಿನಾಂಕಗಳಾದ **14.04.2024** ಮತ್ತು **15.04.2024** ನ್ನು ತಿದ್ದುಪಡಿ ಮಾಡಿ, ಕೇವಲ ಶೀಘ್ರಲಿಪಿಗಾರರ ಹುದ್ದೆಗಳಿಗೆ ಮಾತ್ರ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು **21.04.2024** ರವರೆಗೂ ಹಾಗೂ ಆನ್‌ಲೈನ್ ಮುಖಾಂತರ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕವನ್ನು **22.04.2024** ರವರೆಗೆ ವಿಸ್ತರಿಸಲಾಗಿದೆ.

ಹೀಗಾಗಿ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಮೇಲೆ ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ತಮ್ಮ ಅರ್ಜಿಯನ್ನು ಬೆಳಗಾವಿ ಜಿಲ್ಲಾ ನ್ಯಾಯಾಲಯದ ವೆಬ್-ಸೈಟ್ https://belagavi.dcourts.gov.in/notice-category/recruitments/ ನಲ್ಲಿ ನೀಡಲಾದ ಲಿಂಕ್ ಮೂಲಕ ಸಲ್ಲಿಸಲು ಸೂಚಿಸಲಾಗಿದೆ ಹಾಗೂ ಆನ್‌ಲೈನ್ ಹೊರತುಪಡಿಸಿ ಖುದ್ದಾಗಿ, ಅಂಚೆ ಮೂಲಕ ಅಥವಾ ಬೇರೆ ಯಾವುದೇ ರೀತಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಮುಂದುವರೆದು, ಮೇಲಿನಂತೆ ಅರ್ಜಿಯನ್ನು ಸಲ್ಲಿಸಲು ಹಾಗೂ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕವನ್ನು ಕೇವಲ ಶೀಘ್ರಲಿಪಿಗಾರರ ಹುದ್ದೆಗಳಿಗೆ ಮಾತ್ರ ವಿಸ್ತರಿಸಲಾಗಿದ್ದು, ಶೀಘ್ರಲಿಪಿಗಾರರ ಹುದ್ದೆಗಳಿಗೆ ಹೊರತು ಪಡಿಸಿ ಮಿಕ್ಕುಳಿದ ಬೆರಳಚ್ಚುಗಾರರು, ಆದೇಶ ಜಾರಿಕಾರರು ಹಾಗೂ ಜವಾನರು ಹುದ್ದೆಗಳಿಗೆ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕಃ **14.04.2024** ಹಾಗೂ ಆನ್‌ಲೈನ್ ಮುಖಾಂತರ ಶುಲ್ಕವನ್ನು ಪಾವತಿಸುವ ಕೊನೆಯ ದಿನಾಂಕಃ **15.04.2024** ವೇ ಆಗಿರುತ್ತದೆ.

ಇನ್ನು ಉಳಿದಂತೆ ದಿನಾಂಕಃ 27.02.2024 ರ ಅಧಿಸೂಚನೆಯಲ್ಲಿನ ಇತರೆ ಮಾಹಿತಿಗಳಲ್ಲಿ ಹಾಗೂ ನೀಡಲಾಗಿರುವ ಸೂಚನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

02.04.2024

(ಶ್ರೀಮತಿ. ಎಲ್. ವಿಜಯಲಕ್ಷ್ಮೀದೇವಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ಪ್ರತಿಯನ್ನುಃ**

ಮಹಾ ವಿಲೇಖನಾಧಿಕಾರಿಗಳು, ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ಇವರಿಗೆ ಮುಖಪತ್ರದೊಂದಿಗೆ ಸಲ್ಲಿಸಲಾಗಿದೆ.

**ಪ್ರತಿಯನ್ನು ಮಾಹಿತಿಗಾಗಿಃ**

1) ರಾಜ್ಯದ ಎಲ್ಲಾ ಜಿಲ್ಲೆಗಳ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನಾಯಾಧೀಶರುಗಳಿಗೆ, ಮಾಹಿತಿ ಮತ್ತು ತಮ್ಮ ನ್ಯಾಯಾಲಯಗಳ ಸೂಚನಾ ಫಲಕದಲ್ಲಿ ಹಾಗೂ ತಮ್ಮ ಅಧೀನ ನ್ಯಾಯಾಲಯಗಳ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಕೋರಿ.
2) ಬೆಳಗಾವಿ ಜಿಲ್ಲಾ ಘಟಕದ ಎಲ್ಲಾ ಅಧೀನ ನ್ಯಾಯಾಲಯಗಳ ಸೂಚನಾ ಫಲಕಗಳಲ್ಲಿ ಪಕಟಣೆಗಾಗಿ.
3) ಪ್ರಧಾನ ಕಾರ್ಯದರ್ಶಿಗಳು, ಕಾನೂನು ಇಲಾಖೆ, ಬೆಂಗಳೂರು.
4) ಜಿಲ್ಲಾಧಿಕಾರಿಯವರು, ಬೆಳಗಾವಿ.
5) ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ರವರಿಗೆ ಪತ್ರಿಕಾ ಪ್ರಕಟಣೆಗಾಗಿ.
6) ಉಪನಿರ್ದೇಶಕರು, ಜಿಲ್ಲಾ ಮತ್ತು ವಾರ್ತಾ ಇಲಾಖೆ, ಬೆಳಗಾವಿ ರವರಿಗೆ ಪತ್ರಿಕಾ ಪ್ರಕಟಣೆಗಾಗಿ.
7) ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಹೊರವಲಯ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು ಇವರಿಗೆ, ಕರ್ನಾಟಕ ರಾಜ್ಯ ವಾರ್ತಾ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ (ದ್ವಿಪ್ರತಿಯಲ್ಲಿ)
8) ಸಾಫ್ಟ್ ವೇರ್ ಟೆಕ್ನಿಷಿಯನ್, ಜಿಲ್ಲಾ ನ್ಯಾಯಾಲಯ.ಬೆಳಗಾವಿ
9) ಕಛೇರಿಯ ಸೂಚನಾ ಫಲಕಕ್ಕೆ.

OWN6 - 6436/24